# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಲ್ಲಿ ದಿನಗೂಲಿ ನೌಕರರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾದ/ಮರಣ ಹೊಂದಿದ ಸಿಬ್ಬಂದಿಯವರಿಗೆ ಮತ್ತು ಅವರುಗಳ ಅವಲಂಬಿತರಿಗೆ ಒಂದು ಬಾರಿಯ ಉಪಧನವನ್ನು ಪಾವತಿಸಲು ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1. ಸುತ್ತೋಲೆ ಸಂಖ್ಯೆ: ಆಇ 01 ಜಿಪಅ 2014 ದಿನಾಂಕ:1.2.2014
2. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಡತ ಸಂಖ್ಯೆ: ಗ್ರಾಅಪ 553 ಎಸ್.ಎಸ್.ಕೆ.2020(ಇ)

**ಪ್ರಸ್ತಾವನೆ:**

ರಾಜ್ಯದ ವಿವಿಧ ತಾಲ್ಲೂಕು ಪಂಚಾಯತಿಗಳಲ್ಲಿ ದಿನಗೂಲಿ ನೌಕರರಾಗಿ ಕರ್ತವ್ಯ ನಿರ್ವಹಿಸಿ ಸೇವೆಯಲ್ಲಿರುವಾಗಲೆ ಮರಣ ಹೊಂದಿದ ಮತ್ತು ನಿವೃತ್ತರಾದ ಸಿಬ್ಬಂದಿಯವರುಗಳಿಗೆ ಒಂದು ಬಾರಿಯ ಉಪಧನವನ್ನು ಪಾವತಿಸಲು ಲೆಕ್ಕ ಶೀರ್ಷಿಕೆ 2515-00-102-0-61-251ರಡಿ ಒಟ್ಟು ರೂ.8.91ಲಕ್ಷಗಳನ್ನು ಬಿಡುಗಡೆಗೊಳಿಸುವಂತೆ ಪ್ರಸ್ತಾವಿಸಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಜಿಲ್ಲಾ ಪಂಚಾಯತ್ ಕಾರ್ಯಕ್ರಮದಡಿಯ ವೆಚ್ಚಕ್ಕಾಗಿ ಲೆಕ್ಕ ಶೀರ್ಷಿಕೆ 2515-00-197-1-10-300ರಡಿ ಬಿಡುಗಡೆಗೊಳಿಸಲು ನಿರ್ಣಯಿಸಿ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 14 ವೆಚ್ಚ 6/2021(ಇ) ದಿನಾಂಕ: 10ನೇ ಮಾರ್ಚ್ 2021

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಕೆಳಕಂಡ ಅನುಬಂಧದ ಕಾಲಂ 2ರ ತಾಲ್ಲೂಕು ಪಂಚಾಯತಿಗಳಿಗೆ ಕಾಲಂ 3 ಕಾರ್ಯಕ್ರಮದಡಿ ಮರಣ ಹೊಂದಿದ ಸಿಬ್ಬಂದಿಯವರ ಅವಲಂಬಿತ/ನಿವೃತ್ತರಾದ ದಿನಗೂಲಿ ನೌಕರರ ಒಂದು ಬಾರಿಯ ಉಪಧನ ಪಾವತಿಗಾಗಿ ಒಟ್ಟು ರೂ8.91ಲಕ್ಷ(ರೂಪಾಯಿ ಎಂಟು ಲಕ್ಷದ ತೊಂಬತ್ತೊಂದು ಸಾವಿರಗಳು ಮಾತ್ರ) ಗಳನ್ನು ಬಿಡುಗಡೆಗೊಳಿಸಿದೆ. ಈ ರೀತಿ ಬಿಡುಗಡೆಗೊಳಿಸಿದ ಅನುದಾನವನ್ನು ಮೇಲೆ (1) ರಲ್ಲಿ ಓದಲಾದ ಸುತ್ತೋಲೆಯಲ್ಲಿ ನೀಡಿರುವ ನಿರ್ದೇಶನದಂತೆ ಕ್ರಮವಹಿಸಿ ಬಿಲ್ಲುಗಳ ತೀರುವಳಿಗೆ ಕ್ರಮವಹಿಸತಕ್ಕದ್ದು. ಪ್ರಸ್ತುತ ಪ್ರಕರಣಕ್ಕೆ ಆರ್ಥಿಕ ಇಲಾಖೆ ಮರುಹೊಂದಾಣಿಕೆಗೆ ಸಹಮತಿಸಿದೆ ಎಂದು ಭಾವಿಸತಕ್ಕದ್ದು.

(ಸೂಚನೆ: ಬಿಡುಗಡೆಗೊಳಿಸಿರುವ ಅನುದಾನವನ್ನು ನಿಧಿ-2ಕ್ಕೆ ಜಮೆ ಮಾಡಿಕೊಂಡು, ನಂತರ ಸಂಬಂಧಪಟ್ಟ ಜಿಲ್ಲಾ ಪಂಚಾಯತಿ ಮುಖ್ಯಲೆಕ್ಕಾಧಿಕಾರಿಗಳು ಮರು ಹೊಂದಾಣಿಕೆ ಆದೇಶವನ್ನು ಈ ಕೆಳಗಿನ ಅಧಿಕಾರಿಗಳಿಗೆ ಸುತ್ತೋಲೆರನ್ವಯ ಪ್ರಸ್ತಾವನೆ ಆರ್ಥಿಕ ಇಲಾಖೆಗೆ ಸಲ್ಲಿಸಿ ಖಜಾನೆಯಲ್ಲಿ ಅಪ್ ಲೋಡ್ ಮಾಡಿಕೊಳ್ಳುವುದು.)

ಈ ಕಾರ್ಯವನ್ನು ಆದ್ಯತೆಯ ಮೇಲೆ ಕ್ರಮವಹಿಸತಕ್ಕದ್ದು, ಯಾವುದೇ ಹಂತದಲ್ಲಿ ಅಂದರೆ ಜಿಲ್ಲಾ ಪಂಚಾಯತಿ ಅಥವಾ ಅನುಷ್ಠಾನಾಧಿಕಾರಿಗಳ ಹಂತದಲ್ಲಿ ವಿಳಂಬವಾಗಿ ಅನುದಾನ ವ್ಯಪಗತವಾದಲ್ಲಿ ಮತ್ತೊಮ್ಮೆ ಅನುದಾನವನ್ನು ಒದಗಿಸುವುದಿಲ್ಲವೆಂದು ಮತ್ತು ವಿಳಂಬಗೊಳಿಸಿದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮವಹಿಸಲಾಗುವುದು.

| ಕ್ರ.ಸಂ. | ತಾಲ್ಲೂಕು ಪಂಚಾಯತ್ | ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ | ಲೆಕ್ಕ ಶೀರ್ಷಿಕೆ 2515-00-197-1-10-300ರಡಿ ಬಿಡುಗಡೆಗೊಳಿಸಿದ ಅನುದಾನ | ಒಟ್ಟು (ರೂ.ಲಕ್ಷಗಳಲ್ಲಿ) |
|---|---|---|---|---|
| 1 | 2 | 3 | 4 | 5 |
| 1 | ಕೊಪ್ಪಳ | 2515-00-102-0-61-251 | 1.81 | 1.81 |
| 2 | ಹುಮ್ನಾಬಾದ್ | 2515-00-102-0-61-033 | 7.10 | 7.10 |
| | ಒಟ್ಟು | | **8.91** | **8.91** |

1416015968
11.3.21

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಪುರುಷೋತ್ತಮ್ ಸಿರಗ್ ಬಿ.ಹೆಚ್.)
ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ

1. ಮಹಾಲೇಖಪಾಲರು(ಎ&ಇ) ಲೆಕ್ಕ ಪರಿಶೋಧನೆ 1 & 2, ಕರ್ನಾಟಕ, ಬೆಂಗಳೂರು

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಖಜಾನೆ-2, 7ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು-2ರವರಿಗೆ
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
4. ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು
5. ಜಂಟಿ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
6. ಸಂಬಂಧಿಸಿದ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು
7. ಸಂಬಂಧಿಸಿದ ಜಿಲ್ಲಾ/ಉಪ ಖಜಾನಾಧಿಕಾರಿಗಳು
8. .ರಕ್ಷಾ ಕಡತಕ್ಕೆ
9. ಹೆಚ್ಚುವರಿ ಪ್ರತಿ